ದಿನಾಂಕಃ 25.11.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ಮಾಡಿಸಲಾಯಿತು.

ವಾದಿ ಪರವಾಗಿ ಮುಖ್ಯ ವಿಚಾರಣೆಃ– ಶ್ರೀ ಎಸ್ ಆರ್ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಹಿ ಮಾಡಿ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿದೆ.

ದಿನಾಂಕ 14.10.2014 ರ ನೊಂದಾಯಿತ ಕ್ರಯ ಕರಾರು ಪತ್ರ ದಾಖಲೆಯನ್ನು ನಿಪಿ –1 ಎಂದು ಗುರುತಿಸಲಾಯಿತು. ನಿಪಿ–1 ಕ್ಕೆ ನಾನು ಹಾಗೂ ಈ ದಾವೆಯ ಎಲ್ಲಾ ಪ್ರತಿವಾದಿಗಳು ಸಹಿ ಮಾಡಿರುತ್ತೇವೆಂದು ದಾಖಲೆಗಳ ಪ್ರತೀ ಪುಟಗಳಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ತನ್ನ ಸಹಿ ಎಂದು ಗುರುತಿಸಿಕೊಂಡ ಸಹಿಗಳನ್ನು ನಿಪಿ–1 ಎ ಇಂದ ನಿಪಿ–1 ಸಿ ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ಸಹಿ ಎಂದು ಗುರುತಿಸಿದ ಸಹಿಗಳನ್ನು ನಿಪಿ–1 ಡಿ ಇಂದ ನಿಪಿ–1 ಎಫ್ ಎಂದು , 2 ನೇ ಪ್ರತಿವಾದಿ ಸಹಿ ಎಂದು ಗುರುತಿಸಿದ ಸಹಿಗಳನ್ನು ನಿಪಿ–1 ಜಿ ಇಂದ ನಿಪಿ–1 ಐ ಎಂದು , 3 ನೇ ಪ್ರತಿವಾದಿ ಸಹಿ ಎಂದು ಗುರುತಿಸಿದ ಸಹಿಗಳನ್ನು ನಿಪಿ–1 ಜೆ ಇಂದ ನಿಪಿ–1 ಎಲ್ ಎಂದು ಗುರುತಿಸಲಾಯಿತು . ಮಹಾಬಲ ಹಾಗೂ ನಾಗೇಶ್ ರವರು ನಿಪಿ–1 ರ ದಾಖಲೆಗೆ ಸಾಕ್ಷಿದಾರರಾಗಿ ತಮ್ಮ ಸಹಿಗಳನ್ನು ಹಾಕಿರುತ್ತಾರೆಂದು ನೋಡಿ ಗುರುತಿಸಿದ್ದು , ಆ ಪೈಕಿ ನಾಗೇಶ್ ರವರ ಸಹಿಯನ್ನು ನಿಪಿ–1 ಎಂ ಎಂದು , ಮಹಾಬಲ ರವರ ಸಹಿಯನ್ನು ನಿಪಿ–1 ಎನ್ ಎಂದು ಗುರುತಿಸಲಾಯಿತು.

ಪತ್ರವನ್ನು ನಾಗೇಂದ್ರ ರವರು ಬರೆದಿರುತ್ತಾರೆ . ದಿನಾಂಕ 05.05.2022 ರ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ–2 ಎಂದು, 3 ಅಂಚೆ ರಶೀದಿಗಳನ್ನು ನಿಪಿ–3 ರಿಂದ 5 ಎಂದು , ದಿನಾಂಕ 01.06.2022 ರ ಪ್ರತ್ಯುತ್ತರದ ನೋಟೀಸನ್ನು ನಿಪಿ–6 ಎಂದು , ವಾಪಾಸಾದ ಮುಚ್ಚಿದ್ದ ಅಂಚೆ ಲಕೋಟೆಯನ್ನು ನಿಪಿ–7 ಎಂದು, ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಯಿತು. ಲಕೋಟೆ ಒಳಗೆ ದಿನಾಂಕ 05.05.2022 ರ ನೋಟೀಸಿನ ಪ್ರತಿ ಇರುತ್ತದೆ ಅದನ್ನು ನಿಪಿ–7 ಎ ಎಂದು , ದಿನಾಂಕ 04.06.2022 ರಂದು ಹಳೇ ನಗರದ ಬಸವೇಶ್ವರ ಸರ್ಕಲ್ ನ ಅಂಚೆ ಕಚೇರಿಯ ಪೋಸ್ಟ ಮಾಸ್ಟರ್ ರವರಿಗೆ ನಾನು ಬರೆದಿರುವ 2 ಪತ್ರಗಳನ್ನು ನಿಪಿ-8 ಮತ್ತು 9 ಎಂದು , ದಿನಾಂಕ 24.06.2022 ರಂದು ಅಂಚೆ ಇಲಾಖೆ ರವರು ನೀಡಿರುವ ಹಿಂಬರಹ ದಾಖಲೆಯನ್ನು ನಿಪಿ–10 ಎಂದು, ಅಂಚೆ ಇಲಾಖೆ ರವರು ನೀಡಿರುವ Delivery Manifest ದಾಖಲೆಯನ್ನು ನಿಪಿ–11 ಎಂದು ಗುರುತಿಸಲಾಯಿತು .

ಆದ್ದರಿಂದ, ದಾವಾವನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥನೆ.

1 ಮತ್ತು 3 ನೇ ಪ್ರತಿವಾದಿಗಳ ಪರವಾಗಿ ಪಾಟೀ ಸವಾಲುಃ–

1 ಮತ್ತು 3 ನೇ ಪ್ರತಿವಾದಿಗಳ ಹಾಜರಿದ್ದು ಕಾಲವಕಾಶವನ್ನು ಕೋರಿದ್ದು, ಕಾಲವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓ. ಹೇ. ಕೇ. ಸ. ಇ. ಎ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಭದ್ರಾವತಿ